

ಎಂ. ಗೋಪಾಲಕೃಷ್ಣ ಅಡಿಗ

# ಬೇಂದ್ರೆ

## ಎಚ್ಚೆತ್ತ ಕನ್ನಡ ನಾಡಿನ ವಾಣಿ

ಸಾಹಿತ್ಯಕ್ಕೆ ಯಾವಾಗಲೂ ಜನಜೀವನವೇ ಮೂಲವಸ್ತು, ಜನಮನವೇ ಒರೆಗಲ್ಲು. ಅದು ಎಷ್ಟು ಎತ್ತರಕ್ಕೆ ಏರಿದರೂ ಎಷ್ಟು ಆಳಕ್ಕೆ ಇಳಿದರೂ ಜನಜೀವನವನ್ನೂ ಮೆಟ್ಟಿ ನಿಂತಲ್ಲದೆ ಜನಮನವನ್ನು ಯಾವುದಾದರೊಂದು ಮಟ್ಟದಲ್ಲಿ ಮುಟ್ಟದೆ ಕೃತಾರ್ಥವಲ್ಲ. ಪ್ರತಿಯೊಂದು ದೇಶದ ಕಾವ್ಯ ಸಾಹಿತ್ಯವನ್ನು ಪರೀಕ್ಷಿಸಿದಾಗಲೆಲ್ಲಾ ನಮಗೆ ಅದರ ಸಾಮೂಹಿಕ ಸಾಮಾಜಿಕ ಮೂಲ ಕಂಡುಬರುತ್ತದೆ. ನವೋದಯದ ಕಾಲದಲ್ಲೆಲ್ಲ ಕಾವ್ಯ ಜನಜೀವನದ ಸರಸ್ಸಿನಿಂದಲೇ ಚಿಮ್ಮಿ ಆವಿಯಾಗಿ, ಉಗಿಯಾಗಿ ಕವಿ ಹೃದಯಾಕಾಶದಲ್ಲಿ ತಡೆದು ಎದೆತಣಿಸುವ ವೃಷ್ಟಿಧಾರೆಯಾಗಿ ಸುರಿಯಬೇಕಾಗುತ್ತದೆ. ಹೀಗೆ ಸಮಾಜದ ವಾಣಿಯಾಗಿ ಕೋಟಿಕೋಟಿ ಜನರ ಅಸ್ಪಷ್ಟ ಅಸ್ಫುಟ ಚಿಂತನೆಗಳು, ಚಿಂತೆಯ, ಆಶೆ ನಿರಾಶೆಗಳ ಮೂರ್ತಿಯಾಗಿ ರೂಪುಗೊಳ್ಳುವ ಕಾವ್ಯ ಬರಬರುತ್ತ ಜನರಿಂದ ದೂರವಾಗಿ, ವೈಯಕ್ತಿಕವಾಗಿ ಯಾವುದೇ ಒಂದು ಸಣ್ಣ ಗುಂಪಿನ ಅಥವಾ ಯಾವನೋ ಒಬ್ಬ ವ್ಯಕ್ತಿಯ ವಾಣಿಯಾದಾಗ ಅದರ ಅವನತಿ ಶುರುವಾಗುತ್ತದೆ. ಆಗ ಅದು ಕೃತಕವೂ ಸತ್ವಹೀನವೂ ಆಗುತ್ತದೆ. ಈ ರೀತಿಯಲ್ಲಿ ಕಾವ್ಯನದಿ ಉಸುಬಿನಲ್ಲಿ ಮರೆಯಾದಾಗ ಅದಕ್ಕೆ ಪುನರ್ಜನ್ಮ ಬರಬೇಕಾದಾಗಲೆಲ್ಲ ಆ ನವಜನ್ಮದ ಮುಖರನಾದ ಕವಿ ಮತ್ತೆ ಜನಜೀವನದ ಚಿಲುಮೆಗೆ ಇಳಿದು ರಸನದಿಯನ್ನು ಮೇಲಕ್ಕೆ ತರುತ್ತಾನೆ. ಎಲ್ಲ ದೇಶದಲ್ಲೂ ಎಲ್ಲ ಕವಿಗಳಲ್ಲೂ ಕಾವ್ಯದ ನವಜನ್ಮ ರೂಪುಗೊಂಡಿದ್ದು ಹೀಗೆಯೇ. ಆದರೆ ಸಂಪ್ರದಾಯ ಸಿದ್ಧವಾದ, ವಿದ್ವಜ್ಜನ ಸಮ್ಮತವಾದ, ನಿರ್ಜೀವವೂ ಕೃತಕವೂ ಆದರೂ ಗೌರವಾರ್ಹವೆನ್ನಿಸಿರುವ ಭಾಷೆಯನ್ನು ಬಿಟ್ಟು ಜನಸಾಮಾನ್ಯರ ಭಾಷೆಗೆ ಇಳಿಯಲು ಬಹಳ ಧೈರ್ಯ ಬೇಕು. ಯುಗಕವಿ ಎನ್ನಿಸಿಕೊಳ್ಳಬಲ್ಲವನಲ್ಲಿ ಮಾತ್ರ ಆ ಧೈರ್ಯ ಕಂಡುಬರುತ್ತದೆ. ತಮ್ಮ ಸಾಹಿತ್ಯ ಕಾರ್ಯದಲ್ಲಿ ಅಂಥ ಧೈರ್ಯವನ್ನು ಮೆರೆದು ಜನ ಆಡುವ ಮಾತಿನಲ್ಲೇ ಅತ್ಯುತ್ತಮ ಎನ್ನಿಸುವಂಥ ಕವಿತೆಗಳನ್ನು ಬರೆದ ಪ್ರತಿಭಾವಂತ ಕವಿ ಆಧುನಿಕ ಕನ್ನಡದಲ್ಲಿ ಬೇಂದ್ರೆಯೊಬ್ಬರೇ.

ಈಗ್ಗೆ ಮೂವತ್ತು ವರ್ಷಗಳ ಹಿಂದೆ ಕನ್ನಡದಲ್ಲಿ ಜನಸಾಮಾನ್ಯರ ಮತ್ತು ವಿದ್ಯಾವಂತರ ನಡುವೆ ಉತ್ತರಿಸಲಾರದ ಒಂದು ಕಂದರ ಏರ್ಪಟ್ಟಿತ್ತು. ಇಂಗ್ಲಿಷ್ ವಿದ್ಯೆ ಕಲಿತ ರಸಿಕರು ಆ ಭಾಷೆಯಲ್ಲೇ ಯೋಚಿಸುತ್ತಾ ಅದರಲ್ಲೇ ಮಾತುಕತೆ ನಡೆಸುತ್ತಾ